ಹೊರನಾಡ ಚಿಲುಮೆ

ಕಾಂಗರುನಾಡಿನ ಕನ್ನಡಿಗರಿಂದ ವಿಶ್ವ ಕನ್ನಡಿಗರ ಹೃದಯಕ್ಕೆ

ಆಸ್ಟ್ರೇಲಿಯಾದ ಮೊಟ್ಟಮೊದಲ ಕನ್ನಡ ಇ-ಮಾಸಪತ್ರಿಕೆ
Chilume Circulated in and around 10 countries

ಸಂಪುಟ ೫, ಸಂಚಿಕೆ ೩, ಆಗಸ್ಟ್ ೨೦೧೭

ಕನ್ನಡ ಕಲಿಕೆಯೇ ಬೆನಕ ಪೂಜೆ

Find us on: facebook

ಹೊರನಾಡ ಚಿಲುಮೆ ಇ-ಮಾಸ ಪತ್ರಿಕೆಯ ಓದುಗರಿಗೆಂದು ತೆರೆಯಲಾಗಿರುವ ಫೇಸ್ಬುಕ್ ಗುಂಪು
ಸೇರಿಕೊಳ್ಳಲು ಕೆಳಗಿನ ಲಿಂಕ್ ಕ್ಲಿಕ್ ಮಾಡಿ

JOIN CHILUME FACEBOOK GROUP (You have to be logged in to facebook to join)

ಚಿಲುಮೆಯ ಒಳಗೆ

ಸಂಪಾದಕೀಯ ... ಪು. ೧
ಪರಿಚಯ ... ಪು. ೨

ಚಿಲುಮೆಯ ಒಳಗೆ

ಮಂಕುತಿಮ್ಮನ ಕಗ್ಗ ... ಪು. ೫
ರಾಂ ರಾಮ ... ಪು. ೬

ಚಿಲುಮೆಯ ಒಳಗೆ

ಕಥಾಚಿಲುಮೆ, ರೆಸಿಪಿ ... ಪು. ೮
ಕಾವ್ಯ ಚಿಲುಮೆ ... ಪು. ೯

ಚಿಲುಮೆಯ ಒಳಗೆ

ಪದಪುಂಜ ... ಪು. ೧೦

ಚಿಲುಮೆಯ ಒಳಗೆ

ನೀವು ಮಾಡಿ ... ಪು. ೧೩

ಓದುಗರಿಗೆ ಹಬ್ಬಗಳ ಸಾಲಿನ ಶುಭಾಶಯಗಳು



ಶ್ರಾವಣ ಮಾಸದ ಹಬ್ಬದ ಸಡಗರವು ಶುರುವಾಗಿ ಗೌರೀ ಗಣೇಶನ ಹಬ್ಬವೂ ಮುಗಿಯಿತು. ಅತೀವ ಹುರುಪಿನಿಂದ ಮಾಡಿದ ತಯಾರಿಯು, "ಪೂಜೆ ಮಾಡಿದೆ" ಎನ್ನುವ ಸಾರ್ಥಕ್ಯದೊಂದಿಗೆ ಮನಸ್ಸಿಗೆ ನೆಮ್ಮದಿ ನೀಡುತ್ತದೆಯಲ್ಲವೇ. ಪೂಜೆಯ ಸ್ಥೂಲಾರ್ಥವನ್ನು ಮನ್ನಣೆ ಕೊಡುವುದು ಅಥವಾ ಗೌರವಿಸುವುದು ಎಂದು ಪರಿಗಣಿಸಬಹುದು. ಹೆಚ್ಚಾಗಿ ದೈವಾರಾಧನೆಯಲ್ಲಿ ಬಳಸಲ್ಪಡುವ ಪೂಜೆ ಎಂಬ ಪದವು, ಪೂಜೆ ಮಾಡುವ ವ್ಯಕ್ತಿಯು ತನ್ನ ನಂಬಿಕೆಯ ಅನುಸಾರ ಯಾವುದು ತನ್ನನ್ನು ಪೊರೆಯುತ್ತಿರುವುದೋ, ಆ ಶಕ್ತಿಗೆ ಒಂದು ನಮನರೂಪವಾಗಿ ಮಾಡುವ ಒಂದು ಕ್ರಿಯೆಯೆಂದು ತಿಳಿದುಕೊಳ್ಳಬಹುದು.

ಈ ಪೂಜೆಗೂ, ಭಾಷೆಗೂ ಎತ್ತಣ ಸಂಬಂಧವೆಂದು ಯೋಚಿಸುವ ಮುನ್ನ ಇದರ ಇನ್ನೊಂದು ಆಯಾಮವನ್ನು ಸೂಕ್ಷ್ಮವಾಗಿ ಪರಿಗಣಿಸಬೇಕು. ಅದುವೇ ನಿಸ್ವಾರ್ಥತೆ. ಪೂಜೆ ಮಾಡುವಾಗ ಯಾವ ಫಲಾಪೇಕ್ಷೆಯೂ ಇರಕೂಡದು ಎಂಬುದು ತಿಳಿದವರ ಅಭಿಮತ. ಅದೊಂದು ವಂದನಾರ್ಪಣೆ ಮಾತ್ರ.

ಹೀಗೆ, ಪೂಜೆ ಎನ್ನುವುದು ನಿಸ್ವಾರ್ಥತೆಯಿಂದ ಮನ್ನಣೆ ಮಾಡುವುದು ಎಂಬ ಹಿನ್ನಲೆಯಲ್ಲಿ ನೋಡಿದಾಗ, ಭಾಷಾ ಪೂಜೆಯೂ ಅದೇ ನಿಟ್ಟಿನಲ್ಲಿ ನಡೆಯಬೇಕಲ್ಲವೇ ಎಂದೆನಿಸುತ್ತದೆ. ಹೇಗೆ ದೈವಶಕ್ತಿಯು ಜನರನ್ನು ಸಲಹುವುದು ಎಂದು ಆಸ್ತಿಕರು ನಂಬುವರೋ, ಅದೇ ರೀತಿಯಾಗಿ ಭಾಷೆಯ ಆರಾಧಕರೂ ನುಡಿಯ ಬಗ್ಗೆ ಅತೀವ ಪ್ರೀತಿ ಹೊಂದಿರುತ್ತಾರೆ ಮತ್ತು ಭಾಷೆಯು ಇಂತಹದ್ದನ್ನು ತಮಗೆ ಕೊಡಲಿ ಎಂದು ಅಪೇಕ್ಷಿಸುವುದಿಲ್ಲ. ಬದಲಾಗಿ, ದೈವವನ್ನು ಅರಿಯಲು ತೊಡಗುವಂತೆ, ಭಾಷೆಯ ನಾನಾ ರೂಪಗಳನ್ನು, ವೈವಿಧ್ಯತೆಯನ್ನು ಅರಿಯಲು ಪ್ರಯತ್ನಿಸುತ್ತಾರೆ. ಹಾಗೆ ಅರಿಯಲು ಹೊರಟಾಗ, ಅವರಿಗೆ ಸಂತೋಷ ಕೊಡುವ ಗದ್ಯ, ಪದ್ಯ, ಇತ್ಯಾದಿಗಳನ್ನು ಮಂತ್ರಘೋಷದಂತೆ ಉದ್ಘರಿಸುತ್ತಾರೆ, ವ್ರತದಂತೆ ಛಂದೋವ್ಯಾಕರಣ ಕಲಿಕೆಯಲ್ಲಿ ತೊಡಗಿ, ಕಲಿತಾಗ ಸಿಗುವ ಸಂತೋಷದಿಂದ ಮಂತ್ರಪುಷ್ಪ ಹೇಳುವಂತೆ, ಕಾವ್ಯಗಳನ್ನು ಕಟ್ಟಿ, ಪದ್ಯಪುಷ್ಪಗಳನ್ನು ಭಾಷಾ ಪೂಜಾ ಸಮಾಪ್ತಿಗೆ ಅರ್ಪಿಸುತ್ತಾರೆ. ತಾವು ಓದಿ ಆನಂದಿಸಿದ ಪುಸ್ತಕಗಳನ್ನು ಅಥವಾ ತಮ್ಮ ಅನಿಸಿಕೆಗಳನ್ನೇ ನೈವೇದ್ಯದಂತೆ, ಭಾಷಾ ಭಕ್ತರಿಗೆ ಹಂಚುತ್ತಾರೆ. ಈ ಕ್ರಿಯೆಯಲ್ಲಿ ತೃಪ್ತಿಯನ್ನು ಹೊಂದುತ್ತಾರೆ. ಎಲ್ಲಿಯೂ ಭೋಗ್ಯ ವಸ್ತುಗಳಿಗೆ ಆಸೆ ಪಟ್ಟು ಭಾಷಾ ಪೂಜೆಯನ್ನು ಮಾಡುವುದಿಲ್ಲ.

ಈ ಹಬ್ಬದ ಸಾಲಿನಲ್ಲಿ, ಇಂತಹ ಒಂದು ಭಾಷಾ ಪೂಜೆಯ ಶುರುವಿಗೆ ನಮ್ಮಲ್ಲಿ ಪ್ರೇರಣೆಯಾಗಲಿ. ನುಡಿಪೂಜೆಯು ಸಾಂಗವಾಗಿ ನೆರವೇರಲೆಂದು ಕನ್ನಡದ ಬೆನಕನನ್ನು ಪ್ರಾರ್ಥಿಸೋಣ ಬನ್ನಿ. ಕನ್ನಡದ ಕಲಿಕೆಯೇ ಬೆನಕ ಪೂಜೆಯಾಗಲಿ.
ಬರುವ ಹಬ್ಬಗಳು ಎಲ್ಲರಿಗೂ ಸಾನಂದವನ್ನು ತಂದು, ಆ ಸಂತೃಪ್ತಿಯ ಭಾವದಲ್ಲಿ ಭಾಷೆಯ ಆರಾಧನೆಯೂ ನೆರವೇರಲಿ ಎಂಬುದೇ ಹೊರನಾಡ ಚಿಲುಮೆಯ ತಂಡದ ಅಭಿಲಾಷೆ ಮತ್ತು ಹಾರೈಕೆ. ▪

ಎರಡು ತಿಂಗಳ ಪ್ರಮುಖ ದಿನಗಳು

ಆಗಸ್ಟ್ ಶ್ರೀ ಹೇವಿಳಂಬಿ ನಾಮ ಸಂವತ್ಸರ,
ದಕ್ಷಿಣಾಯನ, ವರ್ಷ ಋತು, ಶ್ರಾವಣ/ಭಾದ್ರಪದ ಮಾಸ

01 ಮಂ - ಮಂಗಳ ಗೌರೀ ವ್ರತ 03 ಗು - ಪವಿತ್ರಾ ಏಕಾದಶಿ
04 ಶು - ಶ್ರೀ ವರಮಹಾಲಕ್ಷ್ಮೀ ವ್ರತ
07 ಸೋ - ರಕ್ಷಾ ಬಂಧನ/ಹುಣ್ಣಿಮೆ / ಚಂದ್ರ ಗ್ರಹಣ
08 ಮಂ - ಮಂಗಳ ಗೌರೀ ವ್ರತ
09 ಬು - ಶ್ರೀ ರಾಘವೇಂದ್ರ ಸ್ವಾಮೀ ಆರಾಧನೆ
11 ಶು - ಸಂಕಷ್ಟ ಚತುರ್ಥಿ, 14 ಸೋ - ಶ್ರೀಕೃಷ್ಣ ಜನ್ಮಾಷ್ಟಮಿ
15 ಮಂ - ಮಂಗಳ ಗೌರೀ ವ್ರತ/ಭಾರತ ಸ್ವಾತಂತ್ರ್ಯ ದಿನ
18 ಶು -ಅಜಾ ಏಕಾದಶಿ 21 ಸೋ - ಬೆನಕನ ಅಮಾವಾಸ್ಯೆ
22 ಮಂ - ಭಾದ್ರಪದ ಮಾಸ ಆರಂಭ
24 ಗು - ಸ್ವರ್ಣಗೌರೀ ವ್ರತ 25 ಶು - ಶ್ರೀ ವರಸಿದ್ಧಿವಿನಾಯಕ ವ್ರತ

ಸೆಪ್ಟೆಂಬರ್ ಶ್ರೀ ಹೇವಿಳಂಬಿ ನಾಮ ಸಂವತ್ಸರ,
ದಕ್ಷಿಣಾಯನ, ವರ್ಷ/ಶರದ್ ಋತು, ಭಾದ್ರಪದ/ಆಶ್ವಯುಜ ಮಾಸ

01 /02 - ಏಕಾದಶಿ
02 ಶ - ಬಕ್ರಿದ್
05 ಮಂ - ಅನಂತನಪದ್ಮನಾಭ ವ್ರತ/ಹುಣ್ಣಿಮೆ
08 ಶು - ಸಂತ ಮೇರಿ ಹಬ್ಬ 09 ಶ - ಸಂಕಷ್ಟ ಚತುರ್ಥಿ
15 ಶು - ಸರ್ ಎಂ ವಿಶ್ವೇಶ್ವರಯ್ಯ ಜನ್ಮ ದಿನ
16 ಶ - ಇಂದಿರಾ ಏಕಾದಶಿ 19/20 ಮಹಾಲಯ ಅಮಾವಾಸ್ಯೆ
21 ಗು - ಆಶ್ವಯುಜ ಮಾಸ ಆರಂಭ
27 ಬು - ಸರಸ್ವತಿ ಪೂಜೆ
28 ಗು - ದುರ್ಗಾಷ್ಟಮಿ
29 ಶು - ಮಹಾ ನವಮಿ 30 ಶ - ವಿಜಯ ದಶಮಿ

ಶ್ರಾವಣ ಮಾಸ ಆರಂಭವಾಗುತ್ತಿಂದಂತೆ, ಹಬ್ಬಗಳು ಸಾಲು ಸಾಲಾಗಿ ಬರಲಾರಂಭಿಸುತ್ತವೆ. ಬಹುತೇಕ ಹಬ್ಬಗಳಲ್ಲಿ ದೇವರನ್ನು ಕೂಡಿಸಿ, ನೆರೆಹೊರೆಯವರನ್ನು ಕರೆಯುವುದೇ ಒಂದು ದೊಡ್ಡ ಸಂಭ್ರಮ. ಹಾಗೆ ಬಂದವರನ್ನು ಸೆಳೆಯುವುದು ದೇವರನ್ನು ಕೂಡಿಸಿರುವ ಮಂಟಪ ಹಾಗೂ ಅದಕ್ಕೆ ಮಾಡಿರುವ ಅಲಂಕಾರಗಳು. ಈ ಆಕರ್ಷಣೆಗಳಲ್ಲಿ ಪ್ರಮುಖ ಪಾತ್ರವಹಿಸುವುದು ಬಣ್ಣಬಣ್ಣದ ರಂಗೋಲಿಗಳು. ಮನೆಯ ಮುಂದೆ ಹಾಕುವ ರಂಗೋಲಿ ಒಂದೆಡೆಯಾದರೆ, ಒಳಗೆ ಕೂಡಿಸಿರುವ ದೇವರ ಮುಂದಿನ ರಂಗೊಲಿಗಳು ವಿಶೇಷವಾದದ್ದು. ಒಂದೊಂದು ಹಬ್ಬಕ್ಕೂ ಒಂದೊಂದು ಚಿತ್ತಾರ, ಅದಕ್ಕೆ ವರ್ಣಗಳು, ಮತ್ತು ಅದರಲ್ಲೂ ಪೈಪೋಟಿಯಾಗಿ ದೊಡ್ಡದಾಗುತ್ತಾ ಹೋಗುವ ಗಾತ್ರಗಳು.ಕೆಲವರ ಮನೆಗಳಲ್ಲಿ ಈ ಸಲ ಏನು ರಂಗೋಲಿ ಹಾಕಿದ್ದೀರಾ ಎಂದು ಕುತೂಹಲದಿಂದ ವಿಚಾರಿಸುವ ಹಾಗಿರುತ್ತದೆ.

ಈ ರಂಗೋಲಿಗಳನ್ನು ಹಾಕುವುದೂ ಒಂದು ಕಲೆ. ಕೆಲವರು ಆಸಕ್ತಿಯಿಂದ ಕಲಿತು ಹಾಕಿದರೆ, ಕೆಲವರಿಗೆ ರಕ್ತಗತ ಕಲೆಯಾಗಿ ಬಂದಿರುವುದೂ ಉಂಟು. ಆದರೆ ಇತ್ತೀಚಿನ ದಿನಗಳಲ್ಲಿ ಸ್ಥಳ ಹಾಗೂ ಸಮಯದ ಅಭಾವಗಳು ಮನೆಗಳಲ್ಲಿ ರಂಗೋಲಿಗಳು ಕಣ್ಮರೆಯಾಗುತ್ತಾ ಬಂದಿವೆ. ಎಲ್ಲಕ್ಕಿಂತ ಹೆಚ್ಚಾಗಿ ಅಂಗಡಿಗಳಲ್ಲಿ ದೊರೆಯುವ ಸಿದ್ಧಪಡಿಸಿದ ಪ್ಲಾಸ್ಟಿಕ್ ಹಾಳೆಗಳ ರಂಗೋಲಿಗಳು, ಸಾಂಪ್ರದಾಯಿಕವಾಗಿ ಕೈಲಿ ಹಾಕುವ ರಂಗೋಲಿಗಳನ್ನು ಮೂಲೆಗುಂಪಾಗಿಸುತ್ತಿವೆ.

ಇತ್ತೀಚೆಗೆ ಹಬ್ಬಗಳಿಗೆಂದು ನಮ್ಮ ಸ್ನೇಹಿತರ ಮನೆಗೆ ಹೋದಾಗ ಕಂಡ ವರ್ಣಮಯ ಸೊಗಸಾದ ರಂಗವಲ್ಲಿಗಳ ಕಂಡು ಬೆರಗಾದೆ. ಮೊದಲಿಗೆ, ಇದು ಕೈಲಿ ಹಾಕಿದ ರಂಗೋಲಿಯೋ ಅಥವಾ ನೆಲದಲ್ಲಿ ಇರಿಸಿರುವ ವರ್ಣ ಚಿತ್ರವೋ ಎಂದು ಅನುಮಾನವಾಯಿತು. ಹತ್ತಿರದಿಂದ ನೋಡಿದಾಗ, ಕೈಯ್ಯಲ್ಲಿ ಪುಡಿಯಿಂದ ರಚಿಸಿದ ರಂಗೋಲಿಗಳೇ ಎಂದು ಖಾತರಿಯಾಯಿತು. ಆಶ್ಚರ್ಯದಿಂದ ಯಾರು ರಚಿಸಿದ್ದೆಂದು ವಿಚಾರಿಸಿದೆ. ನನ್ನ ಸ್ನೇಹಿತರ ಸೊಸೆ ಶ್ರೀಮತಿ ಪ್ರಿಯಾಂಕ ರಾಕೇಶ್ ಹಾಕಿದ ರಂಗವಲ್ಲಿಗಳವು. ನನ್ನ ಆಸಕ್ತಿ ನೋಡಿ ತಾನು ಹಾಕಿರುವ ಹಲವಾರು ರಂಗವಲ್ಲಿಗಳ ಫೊಟೊಗಳನ್ನು ತಂದು ತೋರಿಸಿದರು. ಬರಿಕೈಲಿ ಹಾಕಿರುವ ರಂಗವಲ್ಲಿಗಳು ಇವು ಎಂದು ಹೇಳುವುದೇ ಕಷ್ಟವಾಗುವಂತಿತ್ತು ಆ ಚಿತ್ರಗಳು.

ಸೊಗಸಾದ ಚಿತ್ತಾರಗಳನ್ನು ಬಿಡಿಸುವುದು ಅವರಿಗೆ ಸಹಜವಾಗಿ ಬಂದಿರುವ ಕಲೆಯಂತೆ. ಅವರ ಆಕ್ಕ ಶ್ರೀಮತಿ ಲತಾ ಹೇಮಂತ್ ಮತ್ತು ಅಣ್ಣ ಹೇಮಂತ್ ಕುಮಾರ್ ಇನ್ನೂ ಸೊಗಸಾಗಿ ರಂಗವಲ್ಲಿಗಳನ್ನು ಹಾಕುತ್ತಾರಂತೆ, ಹಾಗೂ ಅವರೇ ನನಗೆ ಸ್ಫೂರ್ತಿ ಎನ್ನುತ್ತಾರೆ ಪ್ರಿಯಾಂಕ.

ಚಿಕ್ಕಂದಿನಿಂದಲೇ ಸಹಜವಾಗಿ ಬಂದಿರುವ ರಂಗೋಲಿ , ಕುಂದನ್ ಸ್ಟೋನ್ ಡಿಸೈನ್, ತಂತಿ ಹಾಗೂ ಮೆಟಲ್ ನಿಂದ ಚಿತ್ತಾರ, ಹೀಗೆ ಹಲವು ಕುಶಲಕಲೆಗಳಿಗೆ ಸೂಕ್ತ ತರಬೇತಿಯನ್ನೂ ಪಡೆದು ನೈಪುಣ್ಯತೆಯನ್ನು ಗಳಿಸಿದ್ದಾರೆ ಈ ಸಹೋದರ ಸಹೋದರಿಯರು.

ಆದರೆ ಸಿದ್ನಿಯಲ್ಲಿ ನೆಲೆಸಿರುವ ಪ್ರಿಯಾಂಕ ಇಲ್ಲಿ ತಮಗೆ ಬೇಕಾಗುವ ಸೂಕ್ತ ರಂಗೋಲಿ ಪುಡಿ ಹಾಗೂ ಇತರೆ ಸಾಮಗ್ರಿಗಳು ಬಲು ಸೀಮಿತವಾಗಿ ದೊರೆಯುವುದರಿಂದ ತಮ್ಮಿಚ್ಛೆಯಂತೆ ರಂಗವಲ್ಲಿಗಳನ್ನು ರಚಿಸಲು ಸಾಧ್ಯವಾಗುತ್ತಿಲ್ಲ ಎನ್ನುತ್ತಾರೆ. ಇವರಿಗೆ ಪ್ಯಾರಾಮಟ ದಲ್ಲಿನ ಭಾರತೀಯ ಉತ್ಸವದ ರಂಗೋಲಿ ಸ್ಪರ್ದೆಯಲ್ಲಿ ಪ್ರಥಮ ಬಹುಮಾನವೂ ಲಭಿಸಿದೆ.

ಇವರ ಈ ಕಲೆಯು ವೃದ್ಧಿಸುತ್ತಾ ಕಂಗೊಳಿಸಲಿ ಮತ್ತು ಇತರರಿಗೆ ಸ್ಫೂರ್ತಿಯಾಗಲಿ ಎಂದು ಹಾರೈಸೋಣ. ▪

ಮತ್ತಷ್ಟು ರಂಗವಲ್ಲಿಯ ಚಿತ್ರಗಳು ಮುಂದಿನ ಪುಟದಲ್ಲಿ ...

ಪ್ರಿಯಾಂಕ ರಾಕೇಶ್ ಅವರ

ರಂಗವಲ್ಲಿಗಳು

ಕನ್ನಡದಲ್ಲಿ ಟೈಪ್ ಮಾಡೋದು ಹೇಗೆ

ಹೊರನಾಡ ಚೆಲುಮೆ - ಸೆಪ್ಟೆಂಬರ್ ೨೦೧೩ ರ ಸಂಚಿಕೆಯಲ್ಲಿ google input tools ಉಪಯೋಗಿಸಿ ಕನ್ನಡದಲ್ಲಿ ಹೇಗೆ ಟೈಪ್ ಮಾಡಬಹುದು ಎಂದು ತಿಳಿದು ಕೊಂಡಿರಿ.

ಪೂರ್ಣ ಮಾಹಿತಿಗೆ ಸೆಪ್ಟೆಂಬರ್ ೨೦೧೩ ರ ಸಂಚಿಕೆಯನ್ನು ನೋಡಲು ಈ ಲಿಂಕ್ ಕ್ಲಿಕ್ ಮಾಡಿ.

ಸಂಕ್ಷಿಪ್ತ ಮಾಹಿತಿ ಇಲ್ಲಿದೆ

ಗೂಗಲ್ ಇನ್ಪುಟ್ ಟೂಲ್ಸ್ (Google input tools) ಯೂನಿಕೋಡ್ ಆಧಾರಿತ ಒಂದು ತಂತ್ರಾಂಶ. ಇದನ್ನು ನಿಮ್ಮ ಕಂಪ್ಯೂಟರ್ ನಲ್ಲಿ install ಮಾಡಿದರೆ ಕನ್ನಡದಲ್ಲಿ ನೀವು ನೇರವಾಗಿ word, excel ಇತ್ಯಾದಿ office ಸಾಫ್ಟ್ವೇರ್ ಅಲ್ಲದೆ, ಸಮಾಜ ತಾಣಗಳಾದ ಫೇಸ್ಬುಕ್ , ಜಿ-ಪ್ಲಸ್ ಇತ್ಯಾದಿಗಳಲ್ಲೂ ಟೈಪ್ ಮಾಡಬಹುದು.

INSTALL ಮಾಡುವ ಮತ್ತು ಉಪಯೋಗಿಸುವ ವಿಧಾನ

☺ http://www.google.com/inputtools/windows/index.html - ಈ ಲಿಂಕ್ ಕ್ಲಿಕ್ ಮಾಡಿ

ಇರುವ ಹಲವಾರು ಭಾಷೆಗಳ ಲಿಸ್ಟ್ ನಲ್ಲಿ ಕನ್ನಡ ಕ್ಲಿಕ್ ಮಾಡಿ install ಮಾಡಿ.

ಆಂಗ್ಲ ಭಾಷೆಯಲ್ಲಿ ಟೈಪ್ ಮಾಡುತ್ತಿದ್ದಾಗ ಕನ್ನಡ ಟೈಪ್ ಮಾಡಲು ಒಟ್ಟಿಗೆ CTRL + G ಕೀ ಒತ್ತಿ. ಆಗ ಆಂಗ್ಲದಿಂದ ಕನ್ನಡಕ್ಕೆ ಕೀಲಿಮಣೆ ಸಿದ್ಧವಾಗುತ್ತದೆ. ನಂತರ ನೀವು ಮತ್ತೆ ಆಂಗ್ಲ ಪದ ಬಳಸಬೇಕಾದರೆ ಮತ್ತೆ CTRL + G ಕೀ ಒಟ್ಟಿಗೆ ಒತ್ತಿ.

ಸೂಚನೆ: ಕೆಲವೊಮ್ಮೆ ಈ ಬಾಕ್ಸ್ ಕಾಣಿಸದಿದ್ದರೆ ಒಟ್ಟಿಗೆ ALT + SHIFT ಕೀ ಒತ್ತಿ



ಮಾನವರೋ ದಾನವರೋ ಭೂಮಾತೆಯನು ತಣಿಸೆ |
ಶೋಣಿತವನೆರೆಯುವರು ಬಾಷ್ಪಸಲುವುದಿರೆ? ||
ಏನು ಹಗೆ! ಏನು ಧಗೆ! ಏನು ಹೊಗೆ! ಯೀ ಧರಣಿ |
ಸೌನಿಕನ ಕಟ್ಟೆಯೇಂ? ಮಂಕುತಿಮ್ಮ ||

ಶೋಣಿತವನೆರೆಯುವರು=ಶೋಣಿತವನು+ಎರೆಯುವರು,
ಭಾಷ್ಪಸಲುಮದಿರೆ=ಭಾಷ್ಪ+ಸಲುವುದು+ಇರೆ,
ಶೋಣಿತ=ರಕ್ತ, ಭಾಷ್ಪ=ಕಣ್ಣೀರು, ಎರೆಯುವುದು=ಸುರಿಸುವುದು, ಸಲುವುದಿರೆ=ಸುರಿಸಬೇಕಾದರೆ.
ಸೌನಿಕ=ಕಟುಕ, ಕಟ್ಟೆ=ಜಗುಲಿ.

ಇವರೇನು ಮನುಷ್ಯರೋ ಅಥವಾ ರಾಕ್ಷಸರೋ? ಈ ಭೂಮಾತೆಯನು ತಣಿಸಲು ಅಂದರೆ ದಾಹಮಿಂಗಿಸಲು ಕಣ್ಣೀರು ಸುರಿಸುವ ಬದಲು ರಕ್ತವನ್ನು ಸುರಿಸಿಹರಲ್ಲ!! ಈ ಪ್ರಪಂಚದಲ್ಲಿನ ಹಗೆ ಮತ್ತು ಹೊಗೆಗಳನ್ನು ನೋಡಿದರೆ ಇಡೀ ಪ್ರಪಂಚವೇ ಕಟುಕನ ಜಗುಲಿಯಂತಿದೆ ಎನ್ನುತ್ತಾರೆ ಮಾನ್ಯ ಗುಂಡಪ್ಪನವರು.

ಮತ್ತದೇ ಯುದ್ಧದ ಸನ್ನಿವೇಶವನ್ನು ಈ ಮುಕ್ತಕದಲ್ಲೂ ಉಲ್ಲೇಖಿಸುತ್ತಾರೆ, ಶ್ರೀ ಗುಂಡಪ್ಪನವರು. ಪಾಪ ಅವರ ಮನ ಎಷ್ಟು ನೊಂದಿತ್ತೋ ಏನೋ? ಇಲ್ಲದಿದ್ದರೆ ಅಂದಿನ ವರ್ತಮಾನ ಸ್ಥಿತಿಗೆ ಇಷ್ಟೊಂದು ಪ್ರತಿಕ್ರಿಯೆ ಬರುತ್ತಿತ್ತೆ? ಇರಲಿ. ಮಾನವರಾದ ನಾಮ ಮಾನವರಂತೆ ಇರದೇ ದಾನವರಂತೆ ಏಕೆ ಒಬ್ಬರಿಗೆ ಮತ್ತೊಬ್ಬರ ರಕ್ತದಾಹ. ಬಾಳುವವನು, 'ಮಾನವ' ಎನ್ನುತ್ತದೆ ಪರಿಭಾಷೆ. ಬಾಳದೆ ಯುದ್ಧಮಾಡಿ ನಾಶಕ್ಕೆ ಕಾರಣರಾದವರನ್ನು ಮಾನ್ಯ ಗುಂಡಪ್ಪನವರು ದಾನವರೆಂದು ಸೂಕ್ತವಾಗಿಯೇ ಹೇಳಿದ್ದಾರೆ.

ಅಹಂಕಾರದಿಂದ, ಆಸೆಯಿಂದ, ಮದ, ಮತ್ಸರಗಳ ಕಾರಣಗಳಿಂದ ಎಲ್ಲ ಯುದ್ಧಗಳೂ ನಡೆಯುತ್ತವೆ. ನವ್ಮ ಪುರಾಣಗಳಲ್ಲೂ ಇಂತಹ ಯುದ್ಧಗಳನ್ನು ನೋಡಬಹುದು. ದಾನವರಾಗಿ ಹುಟ್ಟಿದ ಹಿರಣ್ಯಾಕ್ಷ-ಹಿರಣ್ಯಕಶಿಪುಗಳೂ ಸಹ ತಮಗೆ ಸಿಕ್ಕ ವರಗಳ ಬಲದಿಂದ, ಮದೋನ್ಮತ್ತರಾಗಿ ಭೂಲೋಕವೇನು ದೇವಲೋಕಕ್ಕೂ ಲಗ್ಗೆ ಇಟ್ಟ ಉಲ್ಲೇಖವುಂಟು. ಮಹಾಭಾರತದ ಯುದ್ಧದಲ್ಲೂ ಇಡೀ ಆರ್ಯಾವರ್ತವೇ ಇಬ್ಭಾಗವಾಗಿ ಕೆಲವರು ಕೌರವರ ಮತ್ತೆ ಕೆಲವರು ಪಾಂಡವರ ಪಕ್ಷ ವಹಿಸಿ ಯುದ್ಧಮಾಡಿ 18 ಅಕ್ಷೋಹಿಣಿ ಜನರನ್ನು ಬಲಿ ತೆಗೆದುಕೊಂಡಿತಂತೆ. ಅದು ಪುರಾಣ. ಗ್ರೀಕ್ ಪುರಾಣದಲ್ಲಿ ಬರುವ ಟ್ರೋಜನ್ ಯುದ್ಧವೂ ಸಹ ಒಂದು "ಹೆಲನ್"ಎನ್ನುವ ಹೆಣ್ಣಿಗಾಗಿ ಸುಮಾರು ವರ್ಷಗಳ ಕಾಲ ನಡೆದು ಅಪಾರ ಸಾವು ನೋವುಗಳಿಗೆ ಕಾರಣವಾಯಿತಂತೆ.

ಇನ್ನು ನವ್ಮ ದೇಶದಲ್ಲಿ ಕ್ರಿಸ್ತ ಪೂರ್ವ 323ರ ಸುಮಾರಿಗೆ, ಚಾಣಕ್ಯ ಬರುವವರೆಗೆ, ಸಣ್ಣ ಸಣ್ಣ ರಾಜರು ಮತ್ತು ಕೆಲವು ದೊಡ್ಡ ರಾಜರುಗಳು ಸದಾ ಯುದ್ಧ ನಿರತರು. ಕೇವಲ ಅವರ ದಾನವೀ ಅಹಂಕಾರವನ್ನು ತಣಿಸಲಿಕ್ಕಾಗಿಯೇ ನಡೆದ ಯುದ್ಧಗಳು. ಕ್ಷುಲ್ಲಕ ಕಾರಣಕ್ಕಾಗಿಯೇ ನಡೆವ ಯುದ್ಧಗಳಲ್ಲೆಲ್ಲ ನಡೆಯುವುದು ಸಾಮಾನ್ಯರ ಮಾರಣ ಹೋಮ. ಅದು ದಾನವೀ ಪ್ರವೃತ್ತಿ. ನವ್ಮ ದೇಶವನ್ನೇ ತೆಗೆದುಕೊಂಡರೆ, ಮೊದಲು ಯವನರು, ನಂತರ ಮೊಘಲರು, ನಂತರ ಬ್ರಿಟಿಷರು. ಹೀಗೆ ಆಕ್ರಮಣಕಾರರ ದಂಡೇ ನವ್ಮ ದೇಶವನ್ನು ಲೂಟಿಮಾಡಲು ಹಿಂಡು ಹಿಂಡಾಗಿ ಬಂದವರೇ ಹೆಚ್ಚು. ಇವರು ಸಾಲದೆಂಬಂತೆ, ಬಂದವರು ಡಚ್ಚರು, ಪೋರ್ಚ್ಯುಗೀಸರು, ಎಲ್ಲರೂ ನವ್ಮ ನಾಡಿನ ಮೇಲೆ ದಾಳಿಮಾಡಿದರು. ವಾಚಕರೆ ನೋಡಿ ಭಾರತವು ಯಾವುದೇ ಅನ್ಯ ದೇಶದ ಮೇಲೆ ದಾಳಿ ಮಾಡಿದ್ದನ್ನು ಯಾವುದಾದರೂ ಪುಸ್ತಕದಲ್ಲಿ ಕಂಡಿದ್ದೀರಾ? ಅಖಂಡವಾಗಿದ್ದ ಭಾರತ 200 ವರ್ಷಗಳಲ್ಲಿ ತುಂಡುತುಂಡಾಗಿ ಹರಿದು ಹಂಚಿಹೋಗಿದೆ.

ಹಾಗಾಗಿ ವಾಚಕರೆ, ಅಹಂಕಾರ ದುರಾಸೆ ಈ ಎಲ್ಲ ಯುದ್ಧಗಳಿಗೂ ಕಾರಣವಾಗಿತ್ತು. ಈ ಜಗತ್ತಿನಲ್ಲಿ ಮಾನವರು ಸುಸಂಸ್ಕೃತ ಪ್ರಾಣಿಗಳು. ಅನ್ಯ ಪ್ರಾಣಿಗಳಿಗಿಂತ ಭಿನ್ನ. ಮಾನವತೆಯಿಂದ ತನ್ನ ಜೀವನವನ್ನು ಮತ್ತು ಅನ್ಯರ ಜೀವನವನ್ನೂ ಸಹ ಸುಂದರವಾಗಿ ರೂಪಿಸಿಕೊಳ್ಳಬಲ್ಲ ಶಕ್ತಿ ಅವನಿಗೆ ಇದೆ. ಆದರೆ ಕೇವಲ ಅಹಂಕಾರದಿಂದ ತನ್ನ ಬುಡಕ್ಕೆ ತಾನೇ ಕೊಳ್ಳಿ ಇಟ್ಟುಕೊಂಡು ಅನ್ಯರನ್ನೂ ಸುಡುವ ಈ ದಾನವೀ ಅಥವಾ ಪೈಶಾಚಿಕ ಪ್ರವೃತ್ತಿ ಏಕೆ? ಧರಣಿ ಸಸ್ಯಶ್ಯಾಮಲವಾಗಿರಬೇಕಾದರೆ, ನೀರು ಮತ್ತು ಶ್ರಮದ ಅವಶ್ಯಕತೆ ಉಂಟು. ಅದನ್ನು ಬಿಟ್ಟು ದ್ವೇಷದ ಬೀಜ ಮತ್ತು ರಕ್ತದ ಸಿಂಚನವಾದರೆ, ಬೆಳೆ ಬೆಳೆದೀತೆ? ಹೊಟ್ಟೆ ತುಂಬೀತೆ? ಹಗೆಯ ಹೊಗೆಯಿಂದ ಉಸಿರು ಕಟ್ಟುತ್ತದೆಯೇ ಹೊರತು ಜೀವ ಪೋಷಣೆಯಾಗದು. ಜೀವನ ನಡೆಯದು. ಈ ಪ್ರಪಂಚದ ಗತಿಯೇನು? ಅದು ಹಾಗಾದರೆ ಇಡೀ ಪ್ರಪಂಚವೇ ಕಟುಕನ ಜಗಲಿಯಂತಾಗುತ್ತದೆ ಅಲ್ಲವೇ? ಅಂಥಹ ಭಾವಗಳನ್ನೇ ಮಾನ್ಯಶ್ರೀ ಗುಂಡಪ್ಪನವರು ವ್ಯಕ್ತಪಡಿಸುತ್ತಾರೆ ಈ ಮುಕ್ತಕದಲ್ಲಿ.

ಸಹೃದಯರೇ, ಒಂದು ಸಣ್ಣ ಬೀದಿ ಜಗಳದಿಂದ ಹಿಡಿದು ಒಂದು ಮಹಾ ಪ್ರಪಂಚ ಯುದ್ಧಕ್ಕೂ ಮಾನವತೆಯ ಕೊರತೆ ಮತ್ತು ಅಹಂಕಾರಭರಿತ ದಾನವತೆಯೇ ಕಾರಣ, ದ್ವೇಷವೇ ಕಾರಣ. ಇದರಿಂದ ನಾಶವೇ ಹೊರತು ಬಾಳು ಇಲ್ಲ ಎಂದು ನಾವೂ ಸಹ ಅರಿತು ನವ್ಮ ನಮ್ಮಲ್ಲಿ ಇರುವ ಅಂತಹ ವಿನಾಶಕಾರಿ ಭಾವಗಳನ್ನು ತೊರೆದು, ಈ ಇಡೀ ಜಗತ್ತನ್ನು ಸುಂದರ ತಾಣವನ್ನಾಗಿ ಪರಿವರ್ತಿಸಲು ಪ್ರಯತ್ನಿಸೋಣ.▪

ರಾಂ ರಾಮ

ಇದು ಹಾಸ್ಯ ಪುಟ

ಶ್ರೀ ರಾಮನಾಥ್ ಅವರು ಉತ್ತರಿಸುವ "ನೀವು ಕೇಳಿದಿರಿ" ಬ್ಲಾಗ್ನಲ್ಲಿ ಲಭ್ಯ. ಕೆಳಗಿನ ಲಿಂಕ್ ಕ್ಲಿಕ್ ಮಾಡಿ

ನೀವು ಕೇಳಿದಿರಿ

ರಾಮನಾಥ್
ಭಾಷಣಕಾರರು, ಹಾಸ್ಯ ಲೇಖಕರು

ಪಾದಸೇವಕನಿಂದ ಪರಶಿವನಿಗೊಂದು ಪತ್ರ

ಶ್ರೀ ಪರಶಿವ ಮುಕ್ಕಣ್ಣ ಶಂಭುಲಿಂಗರ ಸಮಕ್ಷಮಕ್ಕೆ ತಮ್ಮ ಪಾದಸೇವಕ ನಂದೀಶನ ಸಾದರ ಪ್ರಣಾಮಗಳು.

ದೇವದೇವ,

ನನ್ನನ್ನು ಕೆಲಸಕ್ಕೆ ಅಪಾಯಿಂಟ್ ಮಾಡಿಕೊಂಡ ಲಾಗಾಯ್ತು ಇಂದಿನವರೆಗೆ ತಮ್ಮಲ್ಲಿ ಏನೇನೂ ಬೇಡಿಕೊಂಡಿಲ್ಲ. ಆದರೆ ಈಗ ನನ್ನ ಅಹವಾಲನ್ನು ತಮ್ಮಲ್ಲಿ ತೋಡಿಕೊಳ್ಳಲೇಬೇಕಾದ ವಿಷಮ ಪರಿಸ್ಥಿತಿ ಮೂಡಿದೆ. ಈ ಪಾದಸೇವಕನ ಉದ್ಧಟತನವನ್ನು ಮನ್ನಿಸಿ, ಮುಂದಿನ ಬಾರಿ ಶಿವರಾತ್ರಿಗೂ ನಾನೇ ನಿಮ್ಮ ವಾಹನವಾಗಿ ಬರಬೇಕೆಂದಿದ್ದಲ್ಲಿ, ಈ ಕೆಳಕಂಡ ಅಂಶಗಳತ್ತ ತಮ್ಮ ಕೃಪಾದೃಷ್ಟಿಯನ್ನು (ಮೂರನೆಯ ಕಣ್ಣಿನದಲ್ಲವೆಂದು ಬಿನ್ನಹ) ಬೀರಬೇಕೆಂದು ಕೋರುತ್ತೇನೆ:

1. ಮೊನ್ನೆ ಬೆಂದಕಾಳೂರಿನಲ್ಲಿ ರಾತ್ರಿಯೆಲ್ಲ ಗುಡಿಯಿಂದ ಗುಡಿಗೆ ಹೋಗುವಾಗ ಹಿಂದುಮುಂದಿನ ವಾಹನಗಳ ಹೊಗೆ, ಧೂಳಿನ ಪರಿಣಾಮವಾಗಿ ಅಲರ್ಜಿಯಾಗಿ ಕಣ್ಣು ಕೆಂಪಾಗಿದೆ. ಇದರಿಂದ "ನಮ್ಮ ಮನೆಯಲ್ಲಿ ಕೆಂಗಣ್ಣಿನಿಂದ ನೋಡುವ ಹಕ್ಕು ನನಗೆ ಮಾತ್ರ ಇರುವಾಗ ನಿನಗೆ ಕೆಂಗಣ್ಣು ಬೀರಲು ಅಧಿಕಾರ ಕೊಟ್ಟವರಾರು? ಧಿಕ್ಕಾರವಿರಲಿ ಪಶು-ಪುರುಷರಿಗೆ" ಎಂದು ನನ್ನ ಪಟ್ಟಮಹಿಷಿ ಕೂಗಾಡಿ, ಗೃಹವಾರ್ತೆಯೇ ಕೆಟ್ಟಿದೆ. ಆದ್ದರಿಂದ ನನ್ನ ಕಣ್ಣಿನ ಸಲುವಾಗಿಯೂ, ನನ್ನ ಮನೆಯ ನೆಮ್ಮದಿಯ ಸಲುವಾಗಿಯೂ, ದಯಮಾಡಿ ಬೆಂದಕಾಳೂರಿನ ಗಲ್ಲಿಗಲ್ಲಿಗಳಲ್ಲಿ ಓಡಾಡುವಾಗ ಕಣ್ಣಿಗೆ ಧರಿಸಲು ಒಂದು "ಆ್ಯಂಟಿ ಗ್ಲೇರ್, ಆ್ಯಂಟಿ ಸ್ಕ್ರ್ಯಾಚ್, ಗಾಗಲ್ಸ್" ತೆಗೆಸಿಕೊಡಿರೆಂದು ಕೇಳಿಕೊಳ್ಳುತ್ತೇನೆ. ರಾತ್ರಿಯಲ್ಲೇ ಹೆಚ್ಚು ತಿರುಗಾಟವಿರುವುದರಿಮದ ನೈಟ್ ವಿಷನ್ ಗ್ಲಾಸ್ ಉತ್ತಮವೆಂದು ನನ್ನ ಹದಿಹರೆಯದ ಮಗನ ಅಭಿಪ್ರಾಯವಾಗಿದೆ. ಪ್ರಭುಚಿತ್ತದಂತೆ ಆಗಲಿ.

2. ಸದರಿ ಧೂಳು, ಹೊಗೆಯ ಬಾಬ್ತಿಗೆ ಸಂಬಂಧಿಸಿದಂತೆಯೇ, ಭುವಿಯ ವಾಯುಮಾಲಿನ್ಯದ ಪರಿಣಾಮವಾಗಿ ಮೂಗೆಲ್ಲ ಅದುರುತ್ತಿದೆ. ಭೂಮಿಯಿಂದ ಹಿಂದಿರುಗಿದ ನನ್ನನ್ನು ಮಾತನಾಡಿಸಲು ಬಂದ ಮೂಷಿಕಣ್ಣ ನನ್ನ ಸೀನಿನ ರಭಸಕ್ಕೆ ಹಾರಿಬಿದ್ದು, ಅವನ ಎಡ ಮುಂಗಾಲಿನ ಎರಡು ಬೆರಳು ಜಖಂ ಆಗಿವೆ. ದೇವಾಸ್ಪತ್ರೆಯ ವೈದ್ಯರು 'ಲಿಗಮೆಂಟ್ ಟೇರ್ ಆಗಿದೆ. ಆರು ತಿಂಗಳಲ್ಲಿ ಸರಿಯಾಗಬಹುದು" ಎಂದಿದ್ದಾರೆ. ಗಣೇಶನ ಹಬ್ಬಕ್ಕೆ ಇನ್ನೂ ಏಳು ತಿಂಗಳಿದೆ. ಅದಕ್ಕೆ ಮುಂಚೆ ಕಾಲು ಸರಿಯಾಗಲಿ ಎಂದು ಸಂಕಷ್ಟಹರ ಗಣಪತಿ ವ್ರತವನ್ನು ಮಾಡಲು ಮೂಷಿಕನಿಗೆ ಹೇಳಿದ್ದೇನೆ. ವಿಷಯಾಂತರವಾದುದಕ್ಕೆ ಕ್ಷಮಿಸಿ. ಬೆಂದಕಾಳೂರಿನ ಇಂಫೆಕ್ಷನ್ ತಪ್ಪಿಸಿಕೊಳ್ಳುವ ಸಲುವಾಗಿ ದಯಮಾಡಿ ನನಗೆ ಐಎಸ್ಐ ಬ್ರ್ಯಾಂಡ್ ಹೆಲ್ಮೆಟ್ ಒಂದನ್ನು ಕೊಡಮಾಡಿರೆಂದು ಕೋರಿಕೊಳ್ಳುತ್ತೇನೆ.

3. ತಾವೇನೋ ಮಹಾಮಹಿಮರು. ಹಾಲಾಹಲವನ್ನೇ ಕುಡಿದ ತಮಗೆ ಡಾಲ್ಡಾ, ವನಸ್ಪತಿ, ಕಮಟಣ್ಣೆ, ಅಡಲ್ಟ್ರೇಟೆಡ್ ಕರ್ಪೂರ, ಕಲಬೆರಕೆ ಉದುಕಡ್ಡಿಗಳು ಏನೇನೂ ಪರಿಣಾಮ ಬೀರದಿರಬಹುದು. ಆದರೆ ನನ್ನಂತಹ ಪಾಮರರ ಗತಿ? ಹೊರಗೆ ನಿಂತಿದ್ದ ನನಗೆ ಬಿಲ್ವಪತ್ರೆ ನೀಡಿದರೆ ಸಾಕಿತ್ತು. ಬದಲಿಗೆ ಒಂದಿಷ್ಟು ಸಿಹಿತಿನಿಸುಗಳನ್ನು ತಂದಿಟ್ಟರು. ಹಾಳು ಚಪಲ. ತಿಂದುಬಿಟ್ಟೆ. ಆಗಿನಿಂದ ಹೊಟ್ಟೆಯಲ್ಲಿ ಮಿಕ್ಸಿ ಇಟ್ಟಂತಹ ಅನುಭವ. ಪಶುವೈದ್ಯರು "ಈ ಕೋಳಿ ಇಂಫೆಕ್ಷನ್ ಆಗಿದೆ" ಎಂದರು. "ಸಾಧ್ಯವಿಲ್ಲ. ನಾನು ಸಸ್ಯಾಹಾರಿ. ಕೋಳಿ ತಿನ್ನುವುದಿಲ್ಲ" ಎಂದೆ. "ಈ ಕೋಲಿ ಎಂದರೆ ಕೋಳಿಯಲ್ಲ, ಅದೊಂದು ಬ್ಯಾಕ್ಟೀರಿಯಾ" ಎಂದು ತಿಳಿಹೇಳಿ, ಮೂರು ದಿನಕ್ಕೆ ಮಾತ್ರೆ ನೀಡಿದ್ದಾರೆ. ಭಗವಾನ್.... ಕ್ಷಮಿಸಿ... ಆ ಪದ ಕರ್ನಾಟಕದಲ್ಲಿ ಇನ್ನೇನೋ ಅರ್ಥ ನೀಡುತ್ತದೆ... ಭಗವಂತ, ಮುಂದಿನ ಸಾರಿ ಈ ಇಂಫೆಕ್ಷನ್ಗಳನ್ನು ತಪ್ಪಿಸಿಕೊಳ್ಳುವ ಸಲುವಾಗಿ ನನ್ನ ಪತ್ನಿಯೇ ತಯಾರಿಸುವ 'ಮೇಕ್ ಇನ್ ಕೈಲಾಸ' ಆಹಾರವನ್ನು ತುಂಬಿಕೊಂಡುಹೋಗಲು ಒಂದು ಹಾಟ್ ಬಾಕ್ಸ್ ದಯಪಾಲಿಸಿರೆಂದು ಬೇಡುತ್ತೇನೆ.

4. ಭೂಜನರು ಒಂದು ಸುಂದರವಾದ ಪದ್ಧತಿಯನ್ನು ಕಂಡುಹಿಡಿದಿದ್ದಾರೆ. ಅವರ ವಾಹನಗಳು ಎಡಕ್ಕಾಗಲಿ, ಬಲಕ್ಕಾಗಲಿ ತಿರುಗುವಾಗ ದೀಪವೊಂದು ಹತ್ತಿಕೊಂಡು ಮಿಣಕ್ ಮಿಣಕ್ ಎನ್ನುತ್ತದೆ; ಜೊತೆಗೆ ಟೊಯ್ಯ ಟೊಯ್ಯ ಸದ್ದೂ ಇರುತ್ತದೆ. ದಯಾಮಯ ಪ್ರಭುಗಳೆ, ನನ್ನ ಎಡಭುಜಕ್ಕೊಂದು, ಬಲಭುಜಕ್ಕೊಂದು ಆ ವಿಧದ ಬೆಳಕನ್ನೂ, ಟೊಯ್ಯ ಟೊಯ್ಯ ಸದ್ದನ್ನೂ ದಯಪಾಲಿಸಲಾರಿರಾ? ಪ್ರತಿ ಟರ್ನಿಂಗ್ನಲ್ಲೂ ಯಾವ ಬೈಕ್, ಯಾವ ಕಾರು, ಯಾವ ಲಾರಿ ಗುದ್ದಿ ನಾನು ರಸ್ತೆಯಲ್ಲೇ ಮ್ಯಾಪ್ ತರಹ ಆಗಿಬಿಡುತ್ತೇನೋ ಎಂಬ ಭಯವನ್ನು ಹೋಗಲಾಡಿಸಲು ಈ ಸದ್ದು-ಬೆಳಕಿನ ಮಿಶ್ರಣವನ್ನು ದಯಪಾಲಿಸಬೇಕೆಂದು ತಮ್ಮಲ್ಲಿ ಆಗ್ರಹಪೂರ್ವಕವಾಗಿ ಬೇಡಿಕೊಳ್ಳುತ್ತಿದ್ದೇನೆ.

ಮುಂದಿನ ಪುಟ ನೋಡಿ ...

5. ಆ ಬೇಡರಕಣ್ಣಪ್ಪನನ್ನು ನೆನೆಸಿಕೊಂಡರೆ ನನಗೆ ಕೋಪ ಬರುತ್ತದೆ. ತಮಗೆ ಬಿಲ್ಪಪತ್ರೆಯನ್ನು ಅರ್ಪಿಸಿದುದನ್ನು ಅರ್ಪಿಸಿದ ಸರಿ. ಆದರೆ ಒಂದೆರಡು ತಿಂಗಳು ಮುಂಚೆ ಅರ್ಪಿಸಿದ್ದಿದ್ದರೆ ಅವನ ಗಂಟೇನು ಹೋಗುತ್ತಿತ್ತು? ಎರಡು ತಿಂಗಳು ಮುಂಚೆಯಾದರೆ ಚಳಿಗಾಲವಿರುತ್ತಿತ್ತು. ಸೋಮಾರಿಗಳು ಹೊದ್ದು ಮಲಗಿರುತ್ತಿದ್ದುದರಿಂದ ಭುವಿಯಲ್ಲಿ ಟ್ರಾಫಿಕ್ ಕಡಿಮೆ ಇರುತ್ತಿತ್ತು. ಅಲ್ಲದೆ, ಓಡಾಟದಿಂದ ಬಾಯಾರಿಕೆ ಆಗುವುದೂ ಕಡಿಮೆಯಾಗುತ್ತಿತ್ತು. ಈಗ ಅರ್ಧ ಕಿಲೋಮೀಟ್ ಕ್ರಮಿಸುವಷ್ಟರಲ್ಲಿ ಬಾಯಿಯ ಪಸೆಯೇ ಆರಿಹೋಗುತ್ತದೆ. ಹಾಗೆಂದು ನೀರು ಕುಡಿಯೋಣವೆಂದು ಒಂದು ಮನೆಯವರನ್ನು ಕೇಳಿದರೆ "ನಮಗೇ ನೀರಿಲ್ಲ. ಇದ್ದಿದ್ದೆಲ್ಲವನ್ನು ತಮಿಳುನಾಡಿನವರು ಕುಡಿದುಬಿಟ್ಟರು. ಮುಂದಿನ ವರ್ಷ ಬಾ ನೋಡೋಣ" ಎಂದರು. ಬಾಯಾರಿಕೆ ತಡೆಯಲಾರದೆ ಅದಾವುದೋ ಬೆಳ್ಳಂದೂರಿನ ಕೆರೆಯಂತೆ. ಅಲ್ಲಿ ಕುಡಿಯಲು ಹೋದೆ. ಆ ನಡುರಾತ್ರಿಯಲ್ಲಿ ಆ ಕೆರೆಯಲ್ಲಿನ ಬೆಳ್ಳನೆಯ ನೊರೆನೊರೆಯಂತಹ ಅಂಶವನ್ನು ಕಂಡು ಒಂದುಕ್ಷಣ ಹಿಮಚ್ಛಾದಿತ ಕೈಲಾಸದಲ್ಲಿ ಇದ್ದೀನೇನೋ ಎಂಬ ಭ್ರಮೆಗೆ ವಶನಾದೆ. ಅಕಟಕಟಾ, ಅಲ್ಲಿಗೆ ಹೋದದ್ದೇ ಪ್ರಮಾದವಾಯಿತು! ದೇವದೇವಾ, ನಿಜಕ್ಕೂ ವರ್ಷಗಟ್ಟಲೆ ಸ್ನಾನವನ್ನೇ ಮಾಡದ ರಕ್ಕಸರ ವಾಸನೆಯನ್ನಾದರೂ ತಡೆದೇನು, ಅನಾಥ ಶ್ವಾನಗಳ ಶವಗಳ ನಾಲ್ಕನೆಯ ದಿನದ ವಾಸನೆಯನ್ನಾದರೂ ತಡೆದೇನು. ಆದರೆ.... ಆ ಕೆರೆಯ ವಾಸನೆಗೆ ಮೂರ್ಛೆ ತಪ್ಪಿದೆ. ಮೂರ್ಛಿತನ ಮೇಲೆ ಅದಾವನೋ ಟೂವೀಲರ್ ಪುಣ್ಯಾತ್ಮ ತನ್ನಲ್ಲಿದ್ದ ಬಾಟಲ್ ನೀರಿನಿಂದ ಪ್ರೋಕ್ಷಣೆ ಮಾಡಿದ್ದರಿಂದ ಎಚ್ಚೆತ್ತೆ. ಬದಲಿಗೆ ಅದೇ ಕೆರೆಯ ನೀರನ್ನೇನಾದರೂ ಹಾಕಿದ್ದಿದ್ದರೆ ಆ್ಯಸಿಡ್ ಅಟ್ಯಾಕ್‌ಗೆ ಒಳಗಾದಂತೆ ಆಗುತ್ತಿತ್ತಂತೆ ನನ್ನ ಚರ್ಮ. ತಮ್ಮ ದಯೆ; ಹೇಗೋ ಬಚಾವಾದೆ. ಆದ್ದರಿಂದ, ಪ್ರಭುವೆ, ಮುಂದಿನ ಬಾರಿ ಧರೆಗೆ ಇಳಿಯುವುದಕ್ಕೆ ಮುನ್ನ ನನ್ನ ಡುಬ್ಬಕ್ಕೊಂದು ವಾಟರ್ ಟ್ಯಾಂಕನ್ನು ಏರಿಸಲು ಮರೆಯಬೇಡಿರೆಂದು ಈ ಮೂಲಕ ಬಿನ್ನವಿಸಿಕೊಳ್ಳುತ್ತೇನೆ.

6. ಅದಾರೋ ಎಲ್ಲಕ್ಕೂ ಸಿದ್ಧನಾದವನೊಬ್ಬ ಮುಖಂಡನಿದ್ದಾನಂತೆ. ಅವನಿಗೆ ಗೋವು 'ಮೊಬೈಲ್ ಫುಲ್ ಮೀಲ್ಸ್' ತರಹ ಕಾಣುತ್ತದಂತೆ. ಗೋವೇನು, ನಂದಿಯೇನು, ನನಗೆ ಎಲ್ಲವೂ ಒಂದೇ ಎನ್ನುವನಂತೆ ಅವನು. ತಮಗೆ ಸದ್ಯದಲ್ಲಿ ಯಾವುದೇ ಅವತಾರ ಎತ್ತುವ ಯೋಜನೆಗಳು ಇಲ್ಲದಿರುವುದರಿಂದ ಈ ಪ್ರಚಂಡ ಸರ್ವಸಿದ್ಧಾಸುರವಧೆ ಸಾಧ್ಯವಿಲ್ಲ. ಪರಿಸ್ಥಿತಿ ಇಂತಿರುವಾಗ, ತಾವು ಅನ್ಯಥಾ ಭಾವಿಸದೆ, ನನಗೆ ಝಿಡ್ ಸೆಕ್ಯೂರಿಟಿ ವ್ಯವಸ್ಥೆ, ಜೊತೆಗೆ ಒಂದಿಷ್ಟು ಮೆಡಿಕಲ್ ಇಂಷುರೆನ್ಸ್ ಮತ್ತು ಲೈಫ್ ಇಂಷುರೆನ್ಸ್ ಮಾಡಿಸಬೇಕೆಂಬುದು, ನನ್ನದಲ್ಲ, ನನ್ನ ಶ್ರೀಮತಿಯ ಕೋರಿಕೆಯಾಗಿದೆ.

7. ಮೂಜಗವಂದಿತರೆ, ತಮ್ಮ ಪಾದದಾಸನ ಪಾದಗಳು ಚೆನ್ನಾಗಿರಬೇಕೆಂಬ ಸದಾಶಯ ಸದಾಶಿವರಾದ ತಮಗೆ ಇದ್ದೇ ಇರುತ್ತದೆ. ಆದರೆ ಬೆಂಗಳೂರಿನ ಬೀದಿಗಳಲ್ಲಿ ಕಾಲು ಭಾಗ ರಸ್ತೆ, ಅರ್ಧಭಾಗ ಹಳ್ಳಗಳು, ಕಾಲು ಭಾಗ ಹಂಪ್‌ಗಳು ಇವೆ. ತಮ್ಮಂತಹವರನ್ನು ಹೊತ್ತ ನನ್ನ ಹಿಮ್ಮಡಿ ಹಳ್ಳಕ್ಕೆ ಸಿಲುಕಿ ತರಚದೆ, ದಿಣ್ಣೆಗೆ ಬೆರಳುಗಳು ಢಿಕ್ಕಿಯಾಗಿ ಸೀಳದೆ ಇರಬೇಕಾದರೆ ನಾಲ್ಕೂ ಕಾಲುಗಳಿಗೆ ಒಂದೊಂದು ಷೂ ಬೇಕಾಗುತ್ತದೆ. ದಯಪಾಲಿಸುವಿರಲ್ಲವೆ?

8. ಕಡೆಯದಾಗಿ, ದಟ್ಟವಾದ ಜನಸಂದಣಿಯಲ್ಲಿ ನನ್ನ ಬಾಲ ಸಿಲುಕಿ ಹರಿದುಹೋಗುವ ಸಾಧ್ಯತೆ ಇರುವುದರಿಂದ, ಭುವಿಯವರು ಪಿಲಿಯನ್‌ನಲ್ಲಿ ಹೆಣ್ಣಿನ ಸೀರೆ ಸಿಲುಕದಂತೆ ಸ್ಯಾರಿ ಗಾರ್ಡ್ ತೊಡಗಿಸಿಕೊಳ್ಳುವಂತೆ, ನನಗೂ ಒಂದು ಟೈಲ್ ಗಾರ್ಡ್ ಕೊಡಮಾಡಿರೆಂದು ಕಳಕಳಿಯಿಂದ ಬೇಡಿಕೊಳ್ಳುತ್ತೇನೆ.

ಈ ಎಲ್ಲ ಸಲಕರಣೆಗಳೊಂದಿಗೆ ಅಲಂಕೃತನಾಗಿ ತಮ್ಮ ಸೇವೆಗೆ ಸಿದ್ಧನಾಗಬಯಸುವ,
ತಮ್ಮ ಪರ್ಮನೆಂಟ್ ಪಾದಸೇವಕ

ನಂದೀಶ ▪



ತಕ್ಕ ಗಂಡ

ಕನಕಾಪುರ ನಾರಾಯಣ

ಓರ್ವ ಸಾಹುಕಾರನಿಗೆ ಸ್ವಯಂಪ್ರಭ ಎನ್ನುವ ಮಗಳು ಮತ್ತು ಸ್ವಯಂಭಾನು ಎಂಬ ಮಗ ಇದ್ದರು.ಸ್ವಯಂಪ್ರಭಾಳಿಗೆ ಪ್ರಾಯ ತುಂಬಿದ್ದರೂ ಕಂಕಣ ಬಲ ಕೂಡಿ ಬಂದಿರಲಿಲ್ಲ. ಮಗಳಿಗೆ ತಕ್ಕ ವರನನ್ನು ಹುಡುಕಲು ಆ ಶ್ರೀಮಂತನೂ, ಅವನ ಹೆಂಡತಿ ಮತ್ತು ಮಗ ಎಲ್ಲರೂ ಎಲ್ಲೆಡೆ ಹುಡುಕಾಟ ನಡೆಸಿದ್ದರು. ಒಂದುದಿನ ಇದ್ದಕ್ಕಿದ್ದ ಹಾಗೆ ಮೂವರಿಗೂ ವರನ ಹುಡುಕಾಟಕ್ಕೆ ಫಲ ಕಂಡಿತು.ಅವಳ ತಂದೆ ವೀರ ಸಿಂಗ್ ಎಂಬ ಬಿಲ್ವಿದ್ಯೆ ಪ್ರವೀಣನನ್ನೂ, ತಾಯಿ ಒಬ್ಬ ವಿದ್ಯಾವಂತ ಪಂಡಿತನನ್ನೂ, ಸ್ವಯಂಭಾನು ಒಬ್ಬ ಹಾರುವ ಯಂತ್ರವನ್ನೇ ಮಾಡುವ ಶಕ್ತಿ ಹೊಂದಿದ್ದ ಯುವಕನನ್ನು ಒಂದೇ ದಿನ ಕರೆತಂದರು. ಇದು ಗೊಂದಲಕ್ಕೀಡಾಯಿತು. ಆಕೆ ಯಾರನ್ನು ವರಿಸಬೇಕು ಎನ್ನುವಷ್ಟರಲ್ಲೇ ಆ ಊರಿನ ಕಳ್ಳನೊಬ್ಬ ಆಕೆಯನ್ನು ಅಪಹಾರಿಕೊಂಡು ಕಾಡಿಗೆ ಕರೆದೊಯ್ದ.

ಅವಳ ಪತ್ತೆ ಹಚ್ಚಲು ಬಹಳ ಕಷ್ಟವಾಯಿತು. ಆಗ ಆ ಮೂವರು ವರರು ಸೇರಿ ಹಾರುವ ಯಂತ್ರದಿಂದ ಎಲ್ಲೆಡೆ ಹಾರುತ್ತಾ,ಪಂಡಿತನ ಜಾಣ್ಮೆ ಮತ್ತು ಲೆಕ್ಕಾಚಾರದಿಂದ ಅವರ ಪತ್ತೆ ಮಾಡಿದರು. ಅಲ್ಲಿ ಬಿಲ್ವಿದ್ಯೆ ಪ್ರವೀಣನಿಗೂ ಆ ಬಲಿಷ್ಠ ಕಳ್ಳನಿಗೂ ದೊಡ್ಡ ಸೆಣೆಸಾಟ ನಡೆದು ಕಳ್ಳನನ್ನು ಸೋಲಿಸಿ ಸ್ವಯಂಪ್ರಭಾಳನ್ನು ಹಿಂತಿರುಗಿ ಮನೆಗೆ ಕರೆತರಲಾಯಿತು. ಈಗ ಆಕೆ ಯಾರನ್ನು ವರಿಸಬೇಕು ಎನ್ನುವುದು ಮತ್ತೆ ಪೇಚಾಟಕ್ಕೆ ತಿರುಗಿತು. ಮೂವರೂ ಆಕೆ ನನ್ನನ್ನೇ ವರಿಸಬೇಕೂ ಎಂದು ಪ್ರತಿಯೊಬ್ಬರೂ ಮುಂದಾದರು..... ಎಂದು ಹೇಳಿ ಬೇತಾಳ ಕಥೆ ಅಲ್ಲಿಗೇ ನಿಲ್ಲಿಸಿತು.....

ಬೇತಾಳದ ಪ್ರಶ್ನೆ ಹೀಗಿತ್ತು: " ಅಂತ್ಯದಲ್ಲಿ ಆಕೆ ಒಬ್ಬನನ್ನು ಮಾತ್ರ ವರಿಸಿದಳು, ಹಾಗಾದರೆ ಆಕೆಗೆ ಸರಿಯಾದ ಗಂಡ ಯಾರು,ಆಕೆ ಯಾರನ್ನು ವರಿಸಿದಳು "?

ಅದಕ್ಕೆ ವಿಕ್ರಮನ ಉತ್ತರ: " ಪಂಡಿತನ ಜಾಣ್ಮೆ ಅಥವಾ ಹಾರುವ ಯಂತ್ರವಿಲ್ಲದಿದ್ದರೂ ತಡವಾಗಾದರೂ ಅಪಹರಣ ಸ್ಥಳಕ್ಕೆ ಬರಬಹುದು,ಆದರೆ ಕಳ್ಳನೊಡನೆ ಕಾಳಗ ಮಾಡಿ ಗೆದ್ದ ವರನೇ ಸರಿಯಾದ ಗಂಡ, ಕಳ್ಳನೊಡನೆ ಹೋರಾಡುದುವು ಮುಖ್ಯ ಅಂಶ, ಆಕೆ ಆತನನ್ನೇ ವರಿಸಬೇಕು " ಎಂದಿತ್ತು.

ಉತ್ತರ ಮೆಚ್ಚಿದ ಬೇತಾಳ "ಹೌದು ವಿಕ್ರಮ ಆಕೆಯ ಆಯ್ಕೆ ಮತ್ತು ನಿನ್ನ ಉತ್ತರ ಎರಡೂ ಸರಿ, ಹ್ಹ ಹ್ಹ " ಎಂದುಹೇಳಿ ಬೇತಾಳ ವಿಕ್ರಮನ ಬೆನ್ನು ಬಿಟ್ಟು ಹಾರಿ ಹೋಯಿತು. ▪

ನಿಂಬೆಕಾಯಿ ಸಾರು

ಬೇಕಾಗುವ ಸಾಮಗ್ರಿಗಳು

- ಮೂರು ನಿಂಬೆಹಣ್ಣು, ಒಂದು ಬಟ್ಟಲು ತೊಗರಿಬೇಳೆ, ಎರಡು ಮಾಗಿದ ಟೊಮಾಟೋ ಹಣ್ಣು
- ಎರಡು ಹಸಿ ಮೆಣಸಿನ ಕಾಯಿ, ಮೂರು ಕೆಂಪು ಮೆಣಸಿನ ಕಾಯಿ
- ಕಡ್ಲೇ ಬೇಳೆ ಕೊತ್ತಂಬರಿ ಬೀಜ ತಲಾ ಒಂದು ಚಮಚ
- ಜೀರಿಗೆ,ಮೆಣಸು,ಅರಿಶಿನ,ಸಾಸಿವೆ ತಲಾ ಅರ್ಧ ಚಮಚ
- ಒಗ್ಗರಣೆಗೆ ಚಿಟಿಕೆ ಇಂಗು, ಎಣ್ಣೆ, ಕರಿಬೇವು, ರುಚಿಗೆ ತಕ್ಕಷ್ಟು ಉಪ್ಪು

ಮಾಡುವ ವಿಧಾನ

- ಬೇಳೆಯನ್ನು ಅರಿಶಿನ ಬೆರೆಸಿ ಬೇಯಿಸಿ ಚೆನ್ನಾಗಿ ತಿರುವಿ ಇಡಿ
- ಹುರಿದ ಒಣ ಮೆಣಸಿನ ಕಾಯಿ, ಕೊತ್ತಂಬರಿ ಬೀಜ, ಕಡ್ಲೇಬೇಳೆ, ಮೆಣಸು, ಜೀರಿಗೆ, ಇಂಗು ಎಲ್ಲಾ ಒಣಗಿಸಿ ಕುಟ್ಟಿ ಅಥವಾ ಮಿಕ್ಸಿಯಲ್ಲಿ ಪುಡಿ ಮಾಡಿಕೊಳ್ಳಿ
- ಎರಡು ಬಟ್ಟಲು ನೀರು ಕುದಿಸಿ ಅರಿಶಿನ ಹೆಚ್ಚಿದ ಟೊಮಾಟೋ,ಕತ್ತರಿಸಿದ ಹಸಿ ಮೆಣಸಿನ ಕಾಯಿ ಉಪ್ಪು ಹಾಕಿ ಬೇಯಿಸಿ
- ನೀರು ಕುದಿಯುವಾಗ ಬೇಳೆ ಬೆರೆಸಿ ಎರಡು ಬಾರಿ ತಿರುವಿ ರುಬ್ಬಿದ ಪುಡಿ ಬೆರೆಸಿ ಕುದಿಸಿ
- ನಿಂಬೆ ರಸವನ್ನು ಬೆರೆಸಿದ ನಂತರ ಸಾಸಿವೆ ಕರಿಬೇವು ಒಗ್ಗರಣೆ ಹಾಕಿ ಒಲೆಯಿಂದಿಳಿಸಿ

ಇನ್ನೂ ನೂರಾರು ರೆಸಿಪ್ಪಿಗಳಿಗೆ **www.sugamakannada.com** ಗೆ ಭೇಟಿಕೊಡಿ.

ರೆಸಿಪಿ ಕೊಡ್ತೀರಾ!

ಒಗಟು

೧. ಅಪ್ಪನ ದುಡ್ಡು ಎಣಿಸೊಕಾಗಲ್ಲ , ಅವ್ವನ ಸೀರೆ ಮಡಿಸೊಕ್ಕಾಗಲ್ಲ

೨. ಹಸಿರು ಗಿಡದ ಮೇಲೆ ಮೊಸರು ಚೆಲ್ಲಿದೆ

ಉತ್ತರಕ್ಕೆ ಪುಟ ೧೨ ನೋಡಿ

ಪ್ರೀತಿ ...

ಪ್ರೀತಿಗೆ ಪರ್ಯಾಯ ಪದವ
ಕೇಳಿದೆಯ ಗೆಳೆಯ!
ಪ್ರೀತಿಗೆ ಪರ್ಯಾಯ
ಪದವು ಇಲ್ಲವಲ್ಲ ಗೆಳೆಯ!

ನಿಘಂಟಿನಲ್ಲಿ ಹುಡುಕಿದೆ
ಗಂಡು ಹೆಣ್ಣ
ನಂಟಿನಲ್ಲಿ ಹುಡುಕಿದೆ!
ವೇದದಲ್ಲಿ ಹುಡುಕಿದೆ!
ಗಂಡು ಹೆಣ್ಣ
ಮೋದದಲ್ಲಿ ಹುಡುಕಿದೆ!
ಗೀತೆಯಲ್ಲಿ ಹುಡುಕಿದೆ
ಗಂಡು ಹೆಣ್ಣ

ಗಾಥೆಯಲ್ಲಿ ಹುಡುಕಿದೆ!
ಜಾತಿಯಲ್ಲಿ ಹುಡುಕಿದೆ
ಗಂಡು ಹೆಣ್ಣ
ಮಾತಿನಲ್ಲಿ ಹುಡುಕಿದೆ!
ನಗುವಿನಲ್ಲಿ ಹುಡುಕಿದೆ
ಗಂಡು ಹೆಣ್ಣ
ಮಗುವಿನಲ್ಲಿ ಹುಡುಕಿದೆ!
ಮಮತೆಯಲ್ಲಿ ಹುಡುಕಿದೆ
ಗಂಡು ಹೆಣ್ಣ
ಕ್ಷಮತೆಯಲ್ಲಿ ಹುಡುಕಿದೆ!
ಸಾವಿನಲ್ಲಿ ಹುಡುಕಿದೆ
ಗಂಡು ಹೆಣ್ಣ
ಕಾವಿನಲ್ಲಿ ಹುಡುಕಿದೆ!

ಪ್ರೀತಿಗೆ ಪರ್ಯಾಯ ಪದವ
ಕೇಳಿದೆಯ ಗೆಳೆಯ!
ಪ್ರೀತಿಗೆ ಪರ್ಯಾಯ
ಪದವು ಇಲ್ಲವಲ್ಲ ಗೆಳೆಯ!

-ಮಾಲು, ಅಡಿಲೈಡ್

ಬ್ಲಾಗ್ ಲೋಕ

ಓದಲು ಚಿತ್ರದ ಕೆಳಗಿರುವ ಲಿಂಕ್ ಕ್ಲಿಕ್ ಮಾಡಿ

ಕನಕಾಪುರ ನಾರಾಯಣ
ಇವರ "ಚಕ್ಕೆ ಮೊಗ್ಗು"

ಸುದರ್ಶನ್. ಏನ್
ಇವರ "ಅನಿವಾಸಿ"


ಬದರಿ ತ್ಯಾಮಗೊಂಡ್ಲು
ಇವರ "ಕಾವ್ಯ ಕಸ್ತೂರಿ"

ಸ್ಮಿತಾ ಮೇಲ್ಕೋಟೆ
ಇವರ "ಮಂದಹಾಸ"

ಮಹಾಂತೇಶ್ ಸಿ.
ಇವರ "ಹಂಗ ಸುಮ್ನ್..."

ನೀವೂ ಜಾಹೀರಾತು ನೀಡಲು ಬಯಸುವಿರಾದರೆ ನಮಗೆ ಇ-ಮೇಲ್ ಮಾಡಿ: horanadachilume@gmail.com

SRI KRISHNA TRAVEL
Travel with a Smile
Contact Mr Sudheendra Rao EMAIL
Mobile 0415 291 723

choice HOME LOANS
Contact Mr.Sathya Bhat EMAIL
Mobile 0412 918 511

Umesh Nagasandra FT
ABN 55 405 83 51 32
Umesh Nagasandra
Mob: 0401 034 456
Email: umesh61@gmail.com
Web: www.arman.com.au
P.O. Box # 4127, Tranmere North, South Australia-5073, Australia.
Contact Mr Umesh EMAIL
Mobile 0401 034 456

AUSTINDIA SANGAM TRANSPORT
Contact Mr Eranna Gotyal EMAIL
Mobile 0404 215 605

ಪದ-ಪುಂಜ (ಶಾನೆ ತಲೆ ಕೆಡಿಸ್ಕೋಬೇಡಿ)

ಕೆಳಕಂಡ ವಾಕ್ಯಕ್ಕೆ ಅರ್ಥಬರುವಂತೆ ಬಿಟ್ಟ ಜಾಗ ತುಂಬುವ ಹಾಗೆ ಉತ್ತರ ಹುಡುಕಿ

೧. ಈ ಹುಡುಗಿಯ ಹೆಸರಿನಲ್ಲೇ ಇದೆಯಲ್ಲ ನಯವಾದ ಅವಳ ಗುಣ.

೨. ಎಲ್ಲರ ಸಮ್ಮುಖದಲ್ಲಿ ನಡೆಯಲು ಅತಿ ಮುಖ್ಯವಾಗಿ ಬೇಕಾದ ಒಪ್ಪಿಗೆ.

೩. ನಾಡಿನ ಪ್ರಮುಖ ನಗರಗಳಿಗೆ ಸಂಪರ್ಕ ಕಲ್ಪಿಸುವ ಮುಖ್ಯ ರಸ್ತೆ?

೪. ಕವಳದವನಿಗೆ ಹೆಚ್ಚಾದ ಚಿಂತೆ.

೫. "_ _ನಿನ್ನಿಂದ ನಾ ಕೆಟ್ಟೆ" . ಎಂದಿರಲ್ಲ. ಯಾವುದರಿಂದ ಹೇಳಿ?

೬. ಯೋಗ್ಯರು, ಭೋಗ್ಯರು, ಭಾಗ್ಯವಂತರು ಆಗಿ ತರಬೇಕಾದ್ದು.

ಮಾಡಬೇಕಾದ ಪದ ಗುಚ್ಛ:-

ಕಾಲಿಲ್ಲದವನ ಕೆರೆಯ ಊರಿನಿಂದ ಬಂದ ದಾಸ ಸಾಹಿತ್ಯದ ಈ ಶ್ರೇಷ್ಠ ಕವಿಯಿತ್ರಿ, ಪರ್ವತರಾಜ ಕುವರಿಯೇನಲ್ಲ.

ನಿಮ್ಮ ಉತ್ತರ ಇಮೇಲ್ ಮಾಡಿ, (horanadachilume@gmail.com)

ಸೆಪ್ಟೆಂಬರ್ ೧೦ ತಮ್ಮ ಉತ್ತರ ಕಳುಹಿಸಲು ಕಡೆಯ ದಿನಾಂಕ.

ಜುಲೈ ಪದ ಪುಂಜ - ಉತ್ತರ

ಕಳೆದ ತಿಂಗಳ ಪದ ಪುಂಜಕ್ಕೆ ಉತ್ತರಿಸಿದವರು

- ಸುಮ ಅಶೋಕ್, ಸಿಡ್ನಿ
- ರಾಘವೇಂದ್ರ ಮೂರ್ತಿ, ಬೆಂಗಳೂರು
- ವೀಣಾ ಕೌಶಿಕ್, ಸಿಡ್ನಿ
- ಪುಷ್ಪವಲ್ಲಿ ಚಂದ್ರ ಶೇಖರ್, ಕೆಂಗೇರಿ ಉಪನಗರ
- ನಂದಿನಿ ರಾಮಕೃಷ್ಣ
- ರಾಜೇಶ್ವರಿ

೧. ಶಕುಂತಲೆಯ ದುರದೃಷ್ಟ, ಈ ಮುನಿ ಆಗಮಿಸಿದ ಸಮಯ ಸರಿ ಇರಲಿಲ್ಲ.

ದೂ	ರ್ವಾ	ಸ

೨. ಕೃತಕತೆಯೆಲಿಲ್ಲ, ಸರ್ವಾಭರಣ ಭೂಷಿತಳಾಗಿ ಸಿಂಗರಿಸಿಕೊಂಡವಳು.

ಸಾ	ಲಂ	ಕೃ	ತೆ

೩. ಸರ್ವವಲ್ಲ, ಕಾಲಿಗೆ ಮೆಟ್ಟುವುದು.

ಹಾ	ವು	ಗ

೪. ಪ್ರಭಾವಶಾಲೀ ವ್ಯಕ್ತಿಗಳ ಅನುಸರಿಸುತ್ತಿರುವವ ಚಿಕ್ಕ ಹುಡುಗನೇ ಆಗಬೇಕೆಂದಿಲ್ಲ.

ಹಿಂ	ಬಾ	ಲ	ಕ

೫.ವ್ಯಕ್ತಿಗಳನ್ನು ಮಂಗನಂತೆ ಹತ್ತಿಳಿದು ಆಡುತ್ತಿದ್ದ ಆಟ, ಮರಿಯಾಗೇ ಹೋಯ್ತೇ?

ಮ	ರ	ಕೋ	ತಿ

೬. ವರ್ಷಕ್ಕೊಮ್ಮೆ ಅನೇಕ ಊರುಗಳಲ್ಲಿ ಧರ್ಮರಾಯಸ್ವಾಮಿಯ ದೇಗುಲಗಳಲ್ಲಿ ನಡೆಯುವ ಉತ್ಸವ.

ಕ	ರ	ಗ

ರಚಿಸಬೇಕಾದ ಪದಪುಂಜ

ಜಗತ್ತಿನ ಮೂರನೆಯ ಅತಿದೊಡ್ಡ ಈ ಜಲ ಸಂಪತ್ತಿಗೂ, ನಮ್ಮ ದೇಶಕ್ಕೂ ಬಲವಾದ ನಂಟು.

ಹಿಂ	ದೂ	ಮ	ಹಾ	ಸಾ	ಗ	ರ

ATTENTION INVESTORS

NEW HOMES AT BLAKES CROSSING
ONLY 31KM FROM ADELAIDE CBD

Turnkey investment packages
from under $299,000*

Deposit only $2,000*

BOOK AN APPOINTMENT WITH UMESH TODAY TO START YOUR INVESTMENT JOURNEY!

Call 0401 034 456
Email umesh.nagasandra@burbank.com.au

*Terms & conditions apply

Burbank
#noplacelikehome

ಜಾಣ ಕರ್ನಾಟಕ

೧. 2017 ರ ಮೈಸೂರು ದಸರಾ ಮಹೋತ್ಸವವನ್ನು ಉದ್ಘಾಟಿಸಲು ಆಯ್ಕೆಯಾಗಿರುವ ಕನ್ನಡದ ಖ್ಯಾತ ಕವಿ ಯಾರು? ಇವರಿಗೆ ರಾಷ್ಟ್ರ ಮಟ್ಟದಲ್ಲಿ ದೊರೆತಿರುವ ಅತ್ಯುನ್ನತ ಪ್ರಶಸ್ತಿ ಯಾವುದು?

೨. ಈ ಕವಿಯ ಗೀತೆಗಳ ಧ್ವನಿಸುರುಳಿ, ಕನ್ನಡದ ಪ್ರಥಮ ಸುಗಮ ಸಂಗೀತದ ಧ್ವನಿಸುರುಳಿ ಎಂಬ ಹೆಗ್ಗಳಿಕೆಗೆ ಪಾತ್ರವಾದುದಲ್ಲದೆ, ಅತ್ಯಂತ ಜನಪ್ರಿಯತೆಯನ್ನು ಗಳಿಸಿತು. ಈ ಧ್ವನಿ ಸುರುಳಿ ಯಾವುದು?

ಸರಿ ಉತ್ತರಕ್ಕೆ ಪುಟ ೧೩ ನೋಡಿ

ಒಗಟು - ಉತ್ತರ

೧. ನಕ್ಷತ್ರ, ಆಕಾಶ ೨. ಮಲ್ಲಿಗೆ ಗಿಡದಲ್ಲಿ ಮಲ್ಲಿಗೆ ಹೂವು

ಹಾಸ್ಯ ಚಿಲುಮೆ

"ಮ್ಯಾನೇಜರು ನಿನ್ನ ಕೆಲಸ ಏನೂಂತ ಹೇಳಿದ್ದಾರಲ್ವೆ?" ಮಾಲೀಕ ಕೇಳಿದ.

ಹೊಸ ನೌಕರ ಕೂಡಲೆ ಹೇಳಿದ "ಹೌದೂ ಸಾರ್ ಹೇಳಿದ್ದಾರೆ, ನೀವು ಬರೋದನ್ನ ಕಂಡ ಕೂಡ್ಲೆ ತಮ್ಮನ್ನ ಎಬ್ಬಿಸಬೇಕಂತೆ" !!

ಮತ್ತಷ್ಟು ಹಾಸ್ಯಕ್ಕೆ ಭೇಟಿ ಕೊಡಿ - ಸುಗಮ ಕನ್ನಡ ಕೂಟ

ರಂಗೋಲಿ ಬುಕ್

ನಿಮ್ಮ ರಂಗೋಲಿ ಇಲ್ಲಿ ಕಾಣಬೇಕೇ? ಇ-ಮೇಲ್ ಮಾಡಿ: horanadachilume@gmail.com

ಮತ್ತಷ್ಟು ರಂಗುರಂಗಿನ ರಂಗೋಲಿ ಮುಂದಿನ ಸಂಚಿಕೆಯಲ್ಲಿ

ರಂಗವಲ್ಲಿ

ಭಾರತೀಯ ಸಂಸ್ಕೃತಿಯಲ್ಲಿ, ನಿಯಮಪ್ರಕಾರ ಮಾಡುವ ಅನೇಕ ಕಾರ್ಯಗಳಲ್ಲಿ ರಂಗೋಲಿ ಬಿಡಿಸುವುದೂ ಒಂದು. ಸಾಮಾನ್ಯವಾಗಿ ಮನೆಯ ಹೆಣ್ಣು ಮಕ್ಕಳು ತಮ್ಮ ದೈನಂದಿನ ಚಟುವಟಿಕೆಯ ಒಂದು ಅಂಗವಾಗಿ ರಂಗೋಲಿ ಹಾಕುವುದನ್ನು ರೂಡಿಸಿಕೊಂಡಿರುತ್ತಾರೆ. ಮನೆಯ ಮುಂದೆ ರಂಗೋಲಿ ಇದ್ದರೆ ಅದೆಷ್ಟು ಲಕ್ಷಣ!

ಕೇವಲ ಸಂಸ್ಕೃತಿ ಅಷ್ಟೇ ಅಲ್ಲದೆ, ರಂಗೋಲಿ ಬಿಡಿಸುವುದರಿಂದ, ರೇಖಾ ಗಣಿತ ಉತ್ತಮಪಡಿಸಿಕೊಳ್ಳುವಲ್ಲಿ ಸಹಕಾರಿ. ಅದೆಷ್ಟು ಚುಕ್ಕಿಗಳು, ಎಂತೆಂತಹ ರೇಖೆಗಳು, ತರಹಾವರಿ ನಮೂನೆಗಳು. ಅಬ್ಬ! ರಂಗೋಲಿ ನಿಮಗೆ ಬೆರಗು ಮಾಡಿಲ್ಲವೇ? ಒಮ್ಮೆ ರಂಗೋಲಿಯಲ್ಲಿ ಕೈ ಆಡಿಸಿ ನೋಡಿ, ಒಂದು ಕಾವ್ಯವೇ ಹುಟ್ಟೀತು ... ▪

ರಚನೆ: ಲತಾ ಹೇಮಂತ್

ಮಾನವನ ನಾಡಿಮಿಡಿತವನ್ನು ಈ ಸರಳ ಪ್ರಯೋಗದಿಂದ ದೃಶ್ಯೀಕರಿಸಬಹುದು (Visualize) !

ಬೇಕಾಗುವ ಸಾಮಾನು:

ಡ್ರಾಯಿಂಗ್ ಪಿನ್, ಬೆಂಕಿ ಕಡ್ಡಿ



ವಿಧಾನ

ಬೆಂಕಿಕಡ್ಡಿಯ ಬುಡಕ್ಕೆ ಒಂದು ಡ್ರಾಯಿಂಗ್ ಪಿನ್ ಚುಚ್ಚಿರಿ.

ಇದನ್ನು, ನಿಮ ಕೈನ ಮಣಿಕಟ್ಟಿನ (wrist) ಜಾಗದಲ್ಲಿ ಸಮತೋಲನ ಬರುವಂತೆ ನಿಲ್ಲಿಸಿ.

ಸಮತೋಲನ ಬರಲು ನಿಮ್ಮ ಕೈಯನ್ನು ಒಂದು ಬೆಂಚಿನ ಮೇಲೆ ಇಡಬಹುದು.

ನಿಧಾನವಾಗಿ ಗಮನಿಸಿದಾಗ ಬೆಂಕಿಕಡ್ಡಿ ಅತ್ತಿಂದಿತ್ತ ವಾಲುವುದನ್ನು ಕಾಣಬಹುದು.

ನಾಡಿಮಿಡಿತ ಏಕೆ ?

ಹೃದಯದ ಎದೆಬಡಿತ ದೇಹದ ಅಪಧಮನಿ ವ್ಯವಸ್ಥೆಯಲ್ಲಿ (arterial system) ನಾಡಿಮಿಡಿತವನ್ನು (pulse) ತರುತ್ತದೆ. ಇದನ್ನು sthethoscope ಮೂಲಕವೂ ಕೇಳಿಸಿಕೊಳ್ಳಬಹುದು. ಮನೆಯಲ್ಲಿ ಮೇಲೆ ತಿಳಿಸಿದ ಸುಲಭ ಮಾರ್ಗದಿಂದ ನೋಡಬಹುದು ▪

ಜಾಣ ಕರ್ನಾಟಕ – ಉತ್ತರ

೧. ಕೆ.ಎಸ್.ನಿಸಾರ್ ಅಹಮದ್, ಪದ್ಮಶ್ರೀ.

೨. ನಿತ್ಯೋತ್ಸವ

ಅಲ್ಲಲ್ಲಿ ಏನೇನು

ನಿಮ್ಮ ಕಾರ್ಯಕ್ರಮವಿದ್ದರೆ ತಿಳಿಸಿ - horanadachilume@gmail.com

ಗಣೇಶೋತ್ಸವ ೨೦೧೭

Whitlam Centre Liverpool

ಸೆಪ್ಟೆಂಬರ್ ೨ ಮತ್ತು ೩
ಶನಿವಾರ ಬೆ ೮-೧೨ ಪೂಜೆ,

ಸಂಜೆ ಸಾಂಸ್ಕೃತಿಕ ಕಾರ್ಯಕ್ರಮ ೫-೮, ಮಹಾಪ್ರಸಾದ
ಭಾನುವಾರ ಬೆ ೮ ರಿಂದ ೧೧ ಸತ್ಯನಾರಾಯಣ ಪೂಜೆ
ಮ ೧೧ ರಿಂದ ೦೨ ಪ್ರಸಾದ, ಗಣಪತಿ ವಿಸರ್ಜನೆ

ನಾದ ಸುರಭಿ

ಭಕ್ತಿ ಗೀತೆ, ಭಾವ ಗೀತೆ, ವಚನ, ಕಗ್ಗ,
ಫಜಲ್, ಬಾನ್ಸುರಿ ವಾದನ

23 Sep 2017, 5:30 PM
Hilda M Davis Citizen Centre, 185, Biggie Street, Liverpool NSW 2170

More information contact sugamakannada@gmail.com
Kanakapura Narayana - 0423 634 979
Ashwin - 0421 221 353

ಈ ಸಂಚಿಕೆಯನ್ನು ನಿಮಗಾಗಿ ತಂದವರು – ಸುಗಮ ಕನ್ನಡ ಕೂಟ – ಸಿಡ್ನಿ, ಆಸ್ಟ್ರೇಲಿಯಾ
ವಿನ್ಯಾಸ ಮತ್ತು ಮುಖ್ಯ ಸಂಪಾದಕರು – ಬದರಿ ತ್ಯಾಮಗೊಂಡ್ಲು ~ ಸಂಕಲನ – ವೀಣಾ ಸುದರ್ಶನ್, ರಾಜಲಕ್ಷ್ಮಿ ನಾರಾಯಣ
ಸಲಹಾ ಸಮಿತಿ –ಕನಕಾಪುರ ನಾರಾಯಣ, ನಾಗೇಂದ್ರ ಅನಂತಮೂರ್ತಿ
ಸೂಚನೆ: ಈ ಸಂಚಿಕೆಯಲ್ಲಿ ಪ್ರಕಟವಾಗಿರುವ ಎಲ್ಲ ವಿಷಯಗಳು ವಿವಿಧ ಲೇಖಕರ ಅನಿಸಿಕೆಗಳು. ಯಾವುದೇ ಅನಾನುಕೂಲವಾದಲ್ಲಿ "ಸುಗಮ ಕನ್ನಡ ಕೂಟ" ಅಥವಾ ಅದಕ್ಕೆ ಸಂಬಂಧಿಸಿದ ವ್ಯಕ್ತಿಗಳು ಜವಾಬ್ದಾರರಲ್ಲ. ಈ ಸಂಚಿಕೆಯಲ್ಲಿ ಪ್ರಕಟವಾದ ಎಲ್ಲ ಸುದ್ದಿ ಮಾಹಿತಿ, ಚಿತ್ರಗಳ ಹಕ್ಕುಗಳು ಸ್ಪಷ್ಟವಾಗಿ ಉಲ್ಲೇಖಿಸಿರದಿದ್ದರೆ ಅದು ಸುಗಮ ಕನ್ನಡ ಕೂಟಕ್ಕೆ ಸೇರಿದೆ.
ಸಂಚಿಕೆಯಲ್ಲಿ ಬಳಸಿದ ಹಲವು ಚಿತ್ರಗಳು ಅಂತರ್ಜಾಲದಿಂದ ಪಡೆದದ್ದು. ಅದರ ಎಲ್ಲ ಹಕ್ಕೂ ಅದರದರ ಕರ್ತೃಗಳಿಗೆ ಸೇರಿದ್ದು.